**ಸಾಕ್ಷಿಯನ್ನು ದಿನಾಂಕ 17.01.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಎದುರುದಾರರ ಪರ ಶ್ರೀ ಎನ್.ಎಂ.ಹೆಚ್, ವಕೀಲರಿಂದಃ**

ನಾನು 7 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಮತ್ತು ಎದುರುದಾರರ ವಿವಾಹವು 2011 ರಲ್ಲಿ ನೆರವೇರಿರುತ್ತದೆ. ನಮ್ಮ ಮನೆಯವರ ಒಪ್ಪಿಗೆ ಮೇರೆಗೆ ನಮ್ಮ ಮದುವೆ ನೆರವೇರಿರುತ್ತದೆ. ನನ್ನ ಮದುವೆ ಸಮಯದಲ್ಲಿ ಎದುರುದಾರರು ಯಾವ ಕೆಲಸ ಮಾಡುತ್ತಿದ್ದರು ಎಂಬ ವಿಚಾರ ಗೊತ್ತಿತ್ತು ಎಂದರೆ ಅವರು ಜಮೀನು ಕೆಲಸ ಮಾಡುತ್ತಿದ್ದರು ಎಂದು ಗೊತ್ತಿತ್ತು, ಆದರೆ ಅವರಿಗೆ ಈಗಾಗಲೇ ಮೊದಲನೆ ಮದುವೆಯಾಗಿರುವ ವಿಚಾರ ನನಗೆ ಗೊತ್ತಿರಲಿಲ್ಲ. ಆ ಸಮಯದಲ್ಲಿ ಮೊದಲನೆ ಹೆಂಡತಿ ಹೆಸರು ಮತ್ತು ಊರು ನನಗೆ ಗೊತ್ತಿರಲಿಲ್ಲ. ಮೊದಲನೆ ಹೆಂಡತಿಯನ್ನು ಮದುವೆಯಾಗಿ ಅವರನ್ನು ತ್ಯಜಿಸಿ, 2 ವರ್ಷಗಳಾಗಿರುತ್ತದೆ ಎಂದು ಎದುರುದಾರರು ನನಗೆ ಹೇಳಿದ್ದರು. ನನಗೆ ಈಗ 38 ವರ್ಷ ಪ್ರಾಯವಾಗಿರುತ್ತದೆ. ನನಗೆ ಮದುವೆಯಾಗುವಾಗ 23 ವರ್ಷ ಪ್ರಾಯವಾಗಿತ್ತು. ಎದುರುದಾರರಿಗೆ ಎಷ್ಟು ಪ್ರಾಯವಾಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಮತ್ತು ಎದುರುದಾರರ ನಿಶ್ಚಿತಾರ್ಥವಾದ ನಂತರ ಮದುವೆ ದಿನಾಂಕ ನಿಗಧಿಯಾದಾಗ ಮೊದಲನೆ ಮದುವೆಯಾಗಿದ್ದ ವಿಚಾರ ನನಗೆ ಗೊತ್ತಾಗಿರುತ್ತದೆ. ಎದುರುದಾರರು ಮೊದಲನೆ ಮದುವೆಯಾಗಿದ್ದ ಬಗ್ಗೆ ನಾನು ಯಾವುದೇ ದಾಖಲೆ ನೋಡಿರುವುದಿಲ್ಲ. ಸಾಮಾನ್ಯವಾಗಿ ಮದುವೆಯಾಗುವಾಗ ವಿವಾಹ ಆಮಂತ್ರಣ ಪತ್ರಿಕೆಯನ್ನು ಜನರಿಗೆ ಮತ್ತು ಸಂಬಂಧಿಕರಿಗೆ ಕೊಟ್ಟು ಮದುವೆಯಾಗುತ್ತಾರೆ ಎಂದರೆ ಸರಿ. ನಮ್ಮ ಊರಿನಿಂದ ಎದುರುದಾರರ ಊರಿಗೆ ಸುಮಾರು 2–3 ಕಿ.ಮೀ ದೂರವಿರುತ್ತದೆ. ಎದುರುದಾರರಿಗೆ ನಮ್ಮ ಊರಿನಲ್ಲೂ ಸಂಬಂಧಿಕರಿರುತ್ತಾರೆ ಎಂದರೆ ಸರಿ. ನಮಗೆ ಎದುರುದಾರರ ಊರಿನಲ್ಲಿ ಸಂಬಂಧಿಕರು ಇರುವುದಿಲ್ಲ. ಒಂದು ವೇಳೆ ಎದುರುದಾರರು ಈಗಾಗಲೇ ಮದುವೆಯಾಗಿದ್ದರೆ ಅವರ ಸಂಬಂಧಿಕರು ನನಗೆ ತಿಳಿಸುತ್ತಿದ್ದರು ಎಂದರೆ ಎದುರುದಾರರನ್ನು ಮದುವೆಯಾಗುತ್ತೇನೆಂದು

**ಪಿ.ಡಬ್ಲ್ಯು-01**

ನಾನು ಯಾರಿಗೂ ಹೇಳಿರಲಿಲ್ಲ. ಎದುರುದಾರರು ನನ್ನನ್ನು ಮದುವೆಯಾಗುವ ಪೂರ್ವದಲ್ಲಿ ಬೇರೆ ಯಾವುದೇ ಮದುವೆಯಾಗಿರಲಿಲ್ಲ ಎಂದರೆ ಸರಿಯಲ್ಲ. ನಿಶ್ಚಿತಾರ್ಥವಾದ ನಂತರ ಒಂದು ತಿಂಗಳ ನಂತರ ನಮ್ಮ ಮದುವೆಯಾಗಿರುತ್ತದೆ. ಎದುರುದಾರರು ನನ್ನನ್ನು ಹೊರತುಪಡಿಸಿ ಬೇರೆ ಯಾರನ್ನು ಮದುವೆಯಾಗದಿದ್ದರೂ ಈಗಾಗಲೇ ಮದುವೆಯಾಗಿದ್ದರು ಎಂದು ನ್ಯಾಯಾಲಯಕ್ಕೆ ಸುಳ್ಳು ಮಾಹಿತಿ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಎದುರುದಾರರ ಪರ ವಕೀಲರು ಮುಂದಿನ ಪಾಟೀಸವಾಲಿಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**

**ನಂಜನಗೂಡು.**